## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015-16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ರೂ.200.00 ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಆಇ 100 ಬಿಆರ್‌ಎಸ್ 2015, ದಿನಾಂಕ 28.01.2016

**ಪ್ರಸ್ತಾವನೆ :**

**2015-16ನೇ** ಸಾಲಿನಲ್ಲಿ ಮೇಲೆ (1)ರ ಆದೇಶದಲ್ಲಿ ಓದಲಾದಂತೆ, **2015-16ನೇ** ಸಾಲಿನ ಆರ್ಥಿಕ ವರ್ಷದ **ಪೂರಕ ಅಂದಾಜುಗಳು-3ನೇ** ಕಂತಿನಲ್ಲಿ **ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ರೂ.200.00 ಲಕ್ಷಗಳನ್ನು** ಹೆಚ್ಚುವರಿಯಾಗಿ ಒದಗಿಸಿದೆ. ಇದರನ್ವಯ ಕರ್ನಾಟಕ ಜೈವಿಕ ಇಂಧನ ನೀತಿ ಅನುಷ್ಠಾನದಡಿ ಜೈವಿಕ ಇಂಧನ ಚಟುವಟಿಕೆಗಳಿಗಾಗಿ **ರೂ.200.00 ಲಕ್ಷಗಳನ್ನು** ಲೆಕ್ಕ **ಶೀರ್ಷಿಕೆ 2501-04-105-0-03-059 (ಯೋಜನೆ)**ರಡಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ39/ಜೈಅಯೋ/2015, ಬೆಂಗಳೂರು, ದಿನಾಂಕ 23.02.2016

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015-16ನೇ** ಸಾಲಿನ ಆರ್ಥಿಕ ವರ್ಷದ **ಪೂರಕ ಅಂದಾಜುಗಳು-3ನೇ** ಕಂತಿನಲ್ಲಿ **ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಜೈವಿಕ ಇಂಧನ ಚಟುವಟಿಕೆಗಳಿಗಾಗಿ ರೂ.200.00 ಲಕ್ಷ**(ಇನ್ನೂರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ **2501-04-105-0-03-059 (ಯೋಜನೆ)**ರಡಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಿ ಆದೇಶಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಗ್ರ್ಯಾಂಟ್-ಇನ್-ಏಡ್ ಬಿಲ್ಲುನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು ಖಜಾನೆಯಿಂದ ಅನುದಾನ ಪಡೆಯತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸಿ, ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 100 ಬಿಆರ್‌ಎಸ್ 2015 ದಿನಾಂಕ 28.01.2016ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
3. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಉಪ ನಿರ್ದೇಶಕರು (ತಾಂತ್ರಿಕ), ರಸ್ತೆ ಮತ್ತು ಸೇತುವೆ ವಿಭಾಗ, ಗ್ರಾ. ಮತ್ತು ಪಂ. ರಾಜ್ ಇಲಾಖೆ.
7. ಉಪ ನಿರ್ದೇಶಕರು, ಟ್ರೆಜರಿ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಜಾಲ, ಗ್ರಾ. ಮತ್ತು ಪಂ. ರಾಜ್ ಇಲಾಖೆ.
9. ರಕ್ಷ ಕಡತಕ್ಕೆ / ಹೆಚ್ಚುವರಿ ಪ್ರತಿ.